**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** | : | **ಶ್ರೀ ಎಸ್.ರವಿ ಹಾಗೂ ಶ್ರೀ ಎಸ್.ವ್ವಿ.ಸಂಕನೂರ** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **547 & 618** |
| **ಉತ್ತರಿಸಬೇಕಾದ ದಿನಾಂಕ** | : | **11.07.2023** |
| **ಉತ್ತರಿಸಬೇಕಾದ ಸಚಿವರು** | : | **ಸಹಕಾರ ಸಚಿವರು** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಿ ಭಾರತ್ ಕೋ ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರಿನಲ್ಲಿ ಖಾಲಿ ಇರುವ 40 ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಕಳೆದ ವರ್ಷ ಪ್ರಕಟಿಸಲಾದ ಅಧಿಸೂಚನೆಯ ನೇರ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದೆ ; | ದಿ ಭಾರತ್ ಕೋ ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು ಇದರಲ್ಲಿ ಖಾಲಿ ಇರುವ ವಿವಿಧ ದರ್ಜೆಯ 18 ಹುದ್ದೆಗಳನ್ನು ತುಂಬಲು ಸಿಬ್ಬಂದಿ ನೇಮಕಾತಿ ಸಮಿತಿಗೆ ನಿಬಂಧಕರ ಪ್ರತಿನಿಧಿಯನ್ನಾಗಿ ಸಹಕಾರ ಸಂಘಗಳ ಜಂಟಿ ನಿಬಂಧಕರು, (ಪಟ್ಟಣ ಬ್ಯಾಂಕುಗಳ ವಿಭಾಗ), ಕೇಂದ್ರ ಕಛೇರಿ, ಬೆಂಗಳೂರು ಇವರನ್ನು ದಿನಾಂಕ: 25-02-2022 ರಂದು ನೇಮಿಸಿ ಆದೇಶಿಸಲಾಗಿದೆ.<br><br>ಈ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಟೈಮ್ಸ್ ಆಫ್ ಇಂಡಿಯಾ, ಪ್ರಜಾವಾಣಿ ಮತ್ತು ವಿಜಯ ಕರ್ನಾಟಕ ದಿನಪತ್ರಿಕೆಗಳಲ್ಲಿ ದಿ: 25-06-2022 ರಂದು ಪ್ರಕಟಣೆ ನೀಡಲಾಗಿದೆ.<br><br>ನಂತರ ಬ್ಯಾಂಕ್ ಮತ್ತೊಮ್ಮೆ ಪ್ರಸ್ತಾವೆ ಸಲ್ಲಿಸಿ ಹೆಚ್ಚುವರಿಯಾಗಿ 4 ಅಟೆಂಡರ್ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಅನುಮತಿ ಕೋರಿದ್ದರ ಹಿನ್ನೆಲೆಯಲ್ಲಿ ದಿನಾಂಕ:06-01-2023ರ ಆದೇಶದಲ್ಲಿ ಹೆಚ್ಚುವರಿಯಾಗಿ 4 ಅಟೆಂಡರ್ ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗಿದೆ.<br><br>ನಂತರ ಬ್ಯಾಂಕ್ ಪುನಃ ದಿ: 11-01-2023 ರಂದು ಟೈಮ್ಸ್ ಆಫ್ ಇಂಡಿಯಾ, ಪ್ರಜಾವಾಣಿ ಮತ್ತು ವಿಜಯ ಕರ್ನಾಟಕ ದಿನಪತ್ರಿಕೆಗಳಲ್ಲಿ ಒಟ್ಟು 22 ಹುದ್ದೆಗಳಿಗೆ (ದಿನಾಂಕ: 25-02-2022 ರ ಪ್ರಕಟಣೆಯ 18 ಹುದ್ದೆಗಳು ಸೇರಿ) ಮರುಪ್ರಕಟಣೆ ನೀಡಿರುತ್ತಾರೆ.<br><br>ನೇರ ನೇಮಕಾತಿಗೆ ಸಂಬಂಧಿಸಿದಂತೆ ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ನಡೆಸಿ ಫಲಿತಾಂಶ ನೀಡಲು ಎಸ್. ಬಿ. ಐ. ಸ್ಟಾಫ್ |
| ಆ) | ಪೂರ್ಣಗೊಳಿಸದಿದ್ದಲ್ಲಿ ಇದು ಯಾವ ಹಂತದಲ್ಲಿದೆ ಮತ್ತು ಯಾವ ಕಾಲಮಿತಿಯೊಳಗೆ ಈ ಅಧಿಸೂಚನೆಯಂತೆ ಒಟ್ಟು 40 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮ ವಹಿಸಲಾಗುವುದು? (ವಿವರ ನೀಡುವುದು) | |

| | | |
|---|---|---|
| | | ಟ್ರೈನಿಂಗ್ ಕಾಲೇಜ್, ಕೆನರಾ ಬ್ಯಾಂಕ್ ಸ್ಟಾಫ್ ಟ್ರೈನಿಂಗ್ ಕಾಲೇಜ್ ಮತ್ತು ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್, ಬೆಂಗಳೂರು ಇವರುಗಳಿಗೆ ಕೋರಿದ್ದು, ಈ ಸಂಸ್ಥೆಗಳಿಂದ ಯಾವುದೇ ಪ್ರತ್ಯುತ್ತರ ಬಾರದೇ ಇರುವುದರಿಂದ ಮತ್ತು ಸೂಕ್ತ ಅಭ್ಯರ್ಥಿಗಳ ಕೊರತೆಯಿಂದ ಪುನಃ ಮರುಪ್ರಕಟಣೆ ನೀಡಿದ್ದರಿಂದ ವಿಳಂಬವಾಗಿರುತ್ತದೆ.<br><br>ನಂತರ ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ನಡೆಸಿ ಫಲಿತಾಶ ನೀಡಲು ಬೆಂಗಳೂರು ವಿಶ್ವ ವಿದ್ಯಾನಿಲಯ, ಮಂಡ್ಯ ವಿಶ್ವ ವಿದ್ಯಾನಿಲಯ, ಮಾನಸ ಗಂಗೋತ್ರಿ ವಿಶ್ವವಿದ್ಯಾನಿಲಯ, ಮೈಸೂರು ಮತ್ತು ಜೈನ್ ವಿಶ್ವವಿದ್ಯಾನಿಲಯ ಬೆಂಗಳೂರು ಇವರುಗಳಿಂದ ಕೊಟೇಷನ್ ಕರೆದಿದ್ದು, ಮಂಡ್ಯ ವಿಶ್ವವಿದ್ಯಾಲಯದವರು ಮಾತ್ರ ಕೊಟೇಷನ್ ನೀಡಿರುತ್ತಾರೆ.<br><br>ಲಿಖಿತ ಪರೀಕ್ಷೆ ನಡೆಸಿ ಫಲಿತಾಂಶ ನೀಡಲು ಮಂಡ್ಯ ವಿಶ್ವ ವಿದ್ಯಾಲಯ, ಮಂಡ್ಯ ಇವರಿಗೆ ದಿನಾಂಕ:15-05-2023ರಂದು ಆದೇಶ ನೀಡಲಾಗಿರುತ್ತದೆ. |

**ಸಂಖ್ಯೆ: ಸಿಒ 126 ಸಿಸಿಬಿ 2023**

K. N. Rajanna

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು